**ಆದ್ಯ ರಂಗಾಚಾರ್ಯ** (ಶ್ರೀರಂಗ)

ಅ.ನ.ಕೃ ಅಗಲಿದ ನಂತರ ಸರ್ಕಾರ ಸಾಹಿತಿಯೋರ್ವರನ್ನೆ ಅಧ್ಯಕ್ಷಸ್ಥಾನಕ್ಕೆ ನೇಮಿಸುವ ನಿರ್ಧಾರವನ್ನು ಮುಂದುವರೆಸಿ ಆಧುನಿಕ ಕನ್ನಡದ ಪ್ರಸಿದ್ಧ ನಾಟಕಕಾರರೂ, ಸಮಕಾಲೀನ ಕನ್ನಡ ರಂಗಭೂಮಿಗೆ ಆಳ ಅಗಲಗಳನ್ನು, ವೈವಿಧ್ಯವನ್ನು ತಂದುಕೊಟ್ಟ ಪ್ರಯೋಗಶೀಲರೂ, 'ಶ್ರೀರಂಗ' ಎಂಬ ಕಾವ್ಯನಾಮದೊಂದಿಗೆ ರಾಷ್ಟ್ರೀಯ ಖ್ಯಾತಿಯ ಲೇಖಕರೂ ಹಿರಿಯರೂ ಆಗಿದ್ದ **ಆದ್ಯ ರಂಗಾಚಾರ್ಯ** ಅವರನ್ನು ನೇಮಿಸಿತು. ಶ್ರೀರಂಗರು ೧೯೨೦ರ ದಶಕದಲ್ಲೇ ಇಂಗ್ಲೆಂಡಿಗೆ ತೆರಳಿ ಅಲ್ಲಿ ಭಾಷಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಹಿಂತಿರುಗಿದ್ದರು. ಸಾಹಿತ್ಯದ ಇನ್ನಿತರ ಪ್ರಕಾರಗಳಲ್ಲೂ ಗಮನಾರ್ಹ ಸಾಧನೆ ಮಾಡಿರುವ ಶ್ರೀರಂಗರು ೧೯೫೬ರಲ್ಲಿ ರಾಯಚೂರಿನಲ್ಲಿ ನಡೆದ ೩೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೬೮ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಫೇಲೋಷಿಪ್ ಗೌರವ ದೊರೆಯಿತು. ೧೯೭೨ರಲ್ಲಿ ಕೇಂದ್ರ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು. ಹೀಗೆ ಸರ್ವಮಾನ್ಯರಾಗಿದ್ದ ಶ್ರೀರಂಗರು ಅ.ನ.ಕೃ ನಂತರ ಆ ಸ್ಥಾನಕ್ಕೆ ಸೂಕ್ತ ವ್ಯಕ್ತಿಯೆಂದು ಪರಿಗಣಿಸಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಿತು.

೧೯೭೧ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ॥ ಆದ್ಯ ರಂಗಾಚಾರ್ಯರ ಅವಧಿಯಲ್ಲಿ ಕೈಗೊಂಡ ಒಂದು ಪ್ರಮುಖ ಯೋಜನೆಯ ಬಗ್ಗೆ, ಅದರಲ್ಲಿ ಭಾಗವಹಿಸಿದ್ದ ಹಿರಿಯ ವಿಮರ್ಶಕ ಪ್ರೊ.ಎಲ್.ಎಸ್.ಶೇಷಗಿರಿರಾವ್ ಹೀಗೆ ಹೇಳುತ್ತಾರೆ: "ವಿವಿಧ ರಾಜ್ಯಗಳ ಸಾಹಿತಿಗಳೊಂದಿಗಿನ ವಿಚಾರ ವಿನಿಮಯ ನಮ್ಮ ನಾಡಿನ ಸಾಹಿತ್ಯದ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂಬುದು ಶ್ರೀರಂಗರ ಅಭಿಪ್ರಾಯವಾಗಿತ್ತು. ಅದಕ್ಕಾಗಿ ಅವರು ಅಕಾಡೆಮಿಯ ವತಿಯಿಂದ ಯೋಜನೆಯೊಂದನ್ನು ಹಮ್ಮಿಕೊಂಡರು. ಇದರ ಮೊದಲ ಹಂತವಾಗಿ ಕೇರಳದ ಸಾಹಿತ್ಯದ ವಿಚಾರವನ್ನು ತಿಳಿದು ಬರುವುದಾಗಿತ್ತು. ಇದಕ್ಕಾಗಿ ಅವರು ಕವಿ ಕೆ.ಎಸ್.ನರಸಿಂಹಸ್ವಾಮಿ ಮತ್ತು ನನ್ನನ್ನು ಈ ಕಾರ್ಯವನ್ನು ಮಾಡಿಕೊಡುವಂತೆ ಕೇಳಿದರು. ಅದಕ್ಕೊಪ್ಪಿದ ನಾವಿಬ್ಬರೂ ಕೇರಳಕ್ಕೆ ತೆರಳಿದೆವು. ಅದೊಂದು ಅಪೂರ್ವ ಅನುಭವ. ನಮ್ಮನ್ನು ಅಲ್ಲಿ ಸತ್ಕರಿಸಿದರು. ಹಲವೆಡೆ ಅಲ್ಲಿನ ಸಾಹಿತಿಗಳನ್ನು ಆಹ್ವಾನಿಸಿ ಅವರ ಸಭೆಯಲ್ಲಿ ನರಸಿಂಹಸ್ವಾಮಿಯವರು ಕನ್ನಡ ಕವನಗಳನ್ನು ಮತ್ತು ಅದರ ಇಂಗ್ಲೀಷ್ ಅನುವಾದವನ್ನು ಓದುತ್ತಿದ್ದರು. ನಾನು ಇಂಗ್ಲೀಷ್‌ನಲ್ಲಿ ಸಾಹಿತ್ಯದ ಪ್ರಕಾರಗಳ ಬಗ್ಗೆ ಮಾತನಾಡುತ್ತಿದ್ದೆ. ಆ ಬಳಿಕ ಒಂದೂವರೆ ಎರಡು ಗಂಟೆ ಕಾಲ ವಿಚಾರ ವಿನಿಮಯವಾಗುತ್ತಿತ್ತು. ತ್ರಿವೆಂದ್ರಮ್‌ನಲ್ಲಿ ಓಣಂ ಹಬ್ಬದ ಸಂದರ್ಭದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲೂ ಭಾಗವಹಿಸುವ ಅವಕಾಶ ಸಿಕ್ಕಿತ್ತು. ಅದೇ ರೀತಿ, ಅಲ್ಲಿಯ ಸಾಹಿತಿಗಳೂ ನಮ್ಮ ನಾಡಿಗೆ ಬಂದಾಗ ಅವರನ್ನು ನಾವು ಗೌರವದಿಂದ ಕಂಡು ಅವರ ಸಾಹಿತ್ಯ ಪ್ರಕಾರಗಳ ಬಗ್ಗೆ ತಿಳಿದುಕೊಂಡೆವು...." [ಛಾಯಚಿತ್ರಗಳು ಪುಸ್ತಕದ ಕೊನೆಯಲ್ಲಿವೆ].

ರಾಷ್ಟ್ರೀಯ ಭಾವೈಕ್ಯತೆಯ ರೀತಿಯಲ್ಲಿ ರಾಷ್ಟ್ರದ ಸಾರಸ್ವತ ಲೋಕದಲ್ಲಿ ಭಾವೈಕ್ಯತೆ ತರುವ ಒಂದು ಅಪೂರ್ವ ಪ್ರಯತ್ನ ಶ್ರೀರಂಗರದ್ದಾಗಿತ್ತು. ೧೯೭೧ ರಿಂದ ೧೯೭೪ರ ವರೆಗಿನ ಇವರ ಅಧ್ಯಕ್ಷಾವಧಿಯ ನಂತರ ಮತ್ತೆ ಶಿಕ್ಷಣ ಸಚಿವರನ್ನೇ ಅಧ್ಯಕ್ಷರಾಗಿ ಮಾಡುವ ಪದ್ಧತಿ ಜಾರಿಗೆ ಬಂತು. ಇದೇಕೆ ಹೀಗಾಯಿತು ಎಂದು ಕೇಳಿದಾಗ ಎಲ್‌ಎಸ್‌ಎಸ್ ಅವರು ಆಗಿನ ಸಂದರ್ಭವನ್ನು ತಿಳಿಸುತ್ತಾರೆ. ಅಕಾಡೆಮಿ ಸ್ಥಾಪನೆಯಾದ ಮೊದಲ ಎರಡು ಅವಧಿಗೆ ಶಿಕ್ಷಣ ಸಚಿವರನ್ನೇ ಅಧ್ಯಕ್ಷರನ್ನಾಗಿ ಮಾಡಲಾಯಿತು. ಅನಂತರ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಜಾರಿಗೆ ಬಂತು. ಸಚಿವ ಸಂಪುಟ ಇಲ್ಲದ ಕಾರಣ ರಾಜ್ಯಪಾಲರು ಅನಕೃ ನಂತರ ಶ್ರೀರಂಗರನ್ನು ಈ ಸ್ಥಾನಕ್ಕೆ ನೇಮಿಸಿದರು. ಆದರೆ ಚುನಾಯಿತ ಪ್ರತಿನಿಧಿಗಳು ಅಧಿಕಾರಕ್ಕೆ ಬಂದ ನಂತರ ಮತ್ತೆ ಸಚಿವರೇ

ಅಧ್ಯಕ್ಷರಾಗತೊಡಗಿದರು. ಕ್ರಮವಾಗಿ ಎ.ಆರ್. ಬದರೀನಾರಾಯಣ್, ಎಂ.ಮಲ್ಲಿಕಾರ್ಜುನಸ್ವಾಮಿ, ಆರ್.ಗುಂಡೂರಾವ್ ಹಾಗೂ ಕೆ.ಎಚ್.ಶ್ರೀನಿವಾಸ್ ಅವರು ಅಕಾಡೆಮಿಯ ಅಧ್ಯಕ್ಷ ಸ್ಥಾನದಲ್ಲಿದ್ದರು. ಈ ವೇಳೆಗೆ ಅನುಭವಿ ಸಾಹಿತಿಯೇ ಅಧ್ಯಕ್ಷರಾಗಬೇಕೆಂಬ ಒತ್ತಡ ಸಾರಸ್ವತ ಲೋಕದಿಂದ ಹೆಚ್ಚಾದುದರಿಂದ ಇದಕ್ಕೆ ಮಣಿದ ಸರ್ಕಾರ, ೧೯೭೮ರಲ್ಲಿ ಸಾಹಿತಿಯನ್ನು ಆ ಸ್ಥಾನಕ್ಕೆ ನೇಮಿಸಲು ನಿರ್ಧರಿಸಿತು. ಆಗ ನೇಮಕಗೊಂಡವರೇ ಡಾ.ಎಂ.ಶಿವರಾಂ.